ಪ್ರಸಾರವಾಗತೊಡಗಿತು. ಸುರಭಿಯ ಪಾತ್ರದ ಫೋಟೊಗಳು, ಅವಳ ಬಗ್ಗೆ ಸುದ್ದಿ ಬರತೊಡಗಿತು. ಮಲ್ಲೇಶ್ವರದಲ್ಲಿ ಅಲ್ಲಲ್ಲಿ ಗುರುತಿಸತೊಡಗಿದರು.

ಬುಡಕಟ್ಟು ಹುಡುಗಿ ಚಿತ್ರಕಲಾವಿದೆಯಾದ ಭಾಗದ ಚಿತ್ರೀಕರಣ ಚಿತ್ರಕಲಾ ಪರಿಷತ್ತಿನ ಹತ್ತಿರ ನಡೆದಿತ್ತು. ಹೊರಗಿನವರು ನುಗ್ಗದಂತೆ ಭದ್ರತೆಯಿತ್ತು. ಲಂಚ್ ಸಮಯದಲ್ಲಿ ಸುರಭಿ ಮತ್ತು ಹೀರೋ ಹಿಂದುಗಡೆ ವಿಶ್ರಾಂತಿಗೃಹದಲ್ಲಿದ್ದರು. ಬೆನ್ನಟ್ಟುವ ಸೆಕ್ಯುರಿಟಿಯನ್ನು ಹಿಂದಿಟ್ಟುಕೊಂಡು ಒಬ್ಬ ನುಗ್ಗಿಬಂದ. ಗಾಬರಿಯಿಂದ ನೋಡಿದರೆ ಅಣ್ಣ ಚಿದಾನಂದ! 'ಸುರಭಿ, ಬೆಳಗಿಂದ ಕಾಯತಿದ್ದೆ. ನಿನ್ನ ನೋಡಕೇ ಬಿಡದಿಲ್ಲ ಇವರು. ಕಷ್ಟಪಟ್ಟು ಬಂದೆ...' ಅಂದ ಏದುಸಿರು ಬಿಡುತ್ತಾ. ಗತಕಾಲ ಧುತ್ತೆಂದು ಎದುರುಬಿದ್ದ ಅನಿರೀಕ್ಷಿತಕ್ಕೆ 'ಅಣ್ಣ!... ನೀನಿಲ್ಲಿ? ಅಪ್ಪ ಅಮ್ಮನೂ ಬಂದಿದಾರಾ?' ಆತಂಕಪಟ್ಟಳು. 'ಇಲ್ಲ. ಪೇಪರು, ಟೀವಿಲೆಲ್ಲ ಬಂದು ನೀನು ಸಿನಿಮಾ ಸ್ಟಾರು ಅಗಿದ್ದು ಗೊತ್ತಾತಲ್ಲ, ಅಪ್ಪನ್ನ ದಬ್ಬಿಕೊಂಡು ಹೋಗಿ ಪೊಲೀಸು ಕಂಪ್ಲೆಂಟು ವಾಪಸ್ಸು ತಗೊಂಡಿವಿ. ಇಲದಿದ್ರು ಈಗ ನಿನ್ನ ಹತ್ರಕೆ ಬರೋ ಧೈರ್ಯ ಯಾರಿಗಾಗ್ತದೆ, ಅಪ್ಪನಡಾ ತಂದು! ಊರಲೆಲ್ಲ ಈಗ ನಿನ್ನ ಸಿನಿಮಾದ್ದೆ ಸುದ್ದಿ' ಅಂದ ಬಿಂಕದಿಂದ. 'ಆಯ್ತಣ್ಣ... ಇದು ಮುಗೀತಿದ್ದ ಹಾಗೆ ನಾನು ಊರಿಗೆ ಬರತೀನಿ' ಅಂದಳು; ಈಗ ಅವನು ಅಲ್ಲಿಂದ ಹೋಗಿರಲಿ ಎಂಬರ್ಥ ಬರುವಂತೆ. 'ಏ... ಏ... ಬಿಡತು ಅಂತ ಹೇಳು. ಸ್ಟಾರು ಆಗಾಕೆ ಪ್ರಾಣ ಕೊಡತಾರೆ ಜನ. ನಿಂಗೆ ಲಕ್ಕು ಹೊಡೆದಿದೆ, ಬಿಡತೀಯ? ಹುಚ್ಚು ಅಂತಾರೆ. ನೋಡು ಆ ಲಾಂಡ್ರಿ ಮತ್ತೊಂದೆಲ್ಲ ನನಗೆ ವಗ್ಗೋದಲ್ಲ. ಏನಾದ್ರು ದೊಡ್ಡ ಬಿಸಿನೆಸ್ ಮಾಡಬೇಕೂಂತಿದೆ. ನಿಂಗೇನು ಇನ್ನು ಕೋಟಿ ಕೋಟಿ ಜಣಜಣಾಂತಿರತದೆ.' ಸುರಭಿ ಅವನ ಮುಖ ನೋಡಿದಳು. 'ಒಂದೈವತ್ತು ಲಕ್ಷ ಕೊಡೋದು ನಿನಗ್ಯಾವ ಲೆಕ್ಕ?' ಅಂದ ಮುಖದಲ್ಲಿ ಹೆಮ್ಮೆ ಸುರಿಸುತ್ತಾ.

## ಬನವಾಸಿ ವೆಂಕಟೇಶ ದೀಕ್ಷಿತ

ಉತ್ತರಕನ್ನಡ ಜಿಲ್ಲೆಯ ಬನವಾಸಿಯವರಾದ ವೆಂಕಟೇಶ ದೀಕ್ಷಿತ, ಸುಮಾರು 150ಕ್ಕೂ ಹೆಚ್ಚು ಕತೆಗಳನ್ನು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಬೆಂಗಳಿ ಮತ್ತು ಶಿರಸಿಯಲ್ಲಿ ವಿದ್ಯಾಭ್ಯಾಸ.

ಬಿ.ಎಸ್ಸಿ. ಪದವಿ. ಅಂಚೆ ಇಲಾಖೆಯಲ್ಲಿ ಕಲಬುರ್ಗಿಯಲ್ಲಿ, ವೃತ್ತಿಜೀವನದ ಆರಂಭ. ಅಲ್ಲಿಂದ ಭಾರತೀಯ ಸೇನೆಯಲ್ಲಿ ಸೇರಿ, ವಾರಂಟ್ ಆಫೀಸರಾಗಿ ಕಾಶ್ಮೀರದ ಬಾರಾಮುಲ್ಲಾ, ಕುಪ್ವಾಡಾ, ಶ್ರೀನಗರ, ನಗ್ರೋಟ ಮತ್ತು ನವದೆಹಲಿ, ನಾಗಪುರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಸೇನೆಯ ಸೇವೆಯ ಬಳಿಕ ದೂರಸಂಪರ್ಕ ಇಲಾಖೆಯಲ್ಲಿ ಕಿರಿಯ ಲೇಖಾಧಿಕಾರಿಯಾಗಿ, ಮುಖ್ಯ ಲೆಕ್ಕಾಧಿಕಾರಿಯಾಗಿ, ಉಪಮಹಾಪ್ರಬಂಧಕರ ವೇತನಶ್ರೇಣಿಯಲ್ಲಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿರುವ ಲೇಖಕರ ಪ್ರಕಟಿತ ಕಥಾ ಸಂಕಲನ 'ಕಾವಡಿ'.